ಕರ್ನಾಟಕ ಸರಕಾರ, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ,
ಐವಾನ್-ಎ-ಶಾಹಿ ಬಡಾವಣೆ, ಕಲಬುರಗಿ

ಸಂಖ್ಯೆ ಸಿ1(1)ಆಡಳಿತ ಹೈಕಮಿ 371(ಜೆ)/50/2014-15 ದಿನಾಂಕ 01.01.2015

**ಸುತ್ತೋಲೆ**

ವಿಷಯ: ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮಿಸಲಾತಿ) (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು 2013ರಡಿಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಾದೇಶಿಕ ಸ್ಥಳೀಯ ವೃಂದಕ್ಕೆ ಸೇರಲಿಚ್ಚಿಸುವ ಅಧಿಕಾರಿ/ ನೌಕರರಿಂದ ಅಭಿಮತ ಪತ್ರ ಸಲ್ಲಿಸುವ ಕುರಿತು

ಉಲ್ಲೇಖ: 1)ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 06 ಪಿಎಲ್ಎಕ್ಸ್ 2012, 06.11.2013
2)ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 43 ಹೆಚ್‌ಕೆಸಿ 2013, 29.01.2014
3)ಈ ಕಛೇರಿಯ ಅಧಿಸೂಚನೆ ಪತ್ರ ಸಮ ಸಂಖ್ಯೆ ದಿನಾಂಕ 24.11.2014
4)ಕರ್ನಾಟಕ ರಾಜ್ಯ ಪತ್ರ ಸಂಪುಟ 150, ಸಂಚಿಕೆ 01 ದಿನಾಂಕ 01.01.2015

===

ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ವೀಸಲಾತಿ) ಆದೇಶ 2013ರ ಅಧಿಸೂಚನೆಯ ಕಂಡಿಕೆ 2(ಐ) ಮತ್ತು ಕಂಡಿಕೆ 13ರನ್ವಯ ಉಲ್ಲೇಖ (3)ರ ಅಧಿಸೂಚನೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಕಲಬುರಗಿ ಆಯುಕ್ತರ ನೇಮಕಾತಿ ಪ್ರಾಧಿಕಾರದ ವ್ಯಾಪ್ತಿಯ ಕಛೇರಿಗಳಲ್ಲಿನ ಗುಂಪು ಬಿ, ಸಿ ಮತ್ತು ಡಿ ಹುದ್ದೆಗಳಲ್ಲಿ ವೃಂದಗಳವಾರು ಹೈದ್ರಾಬಾದ ಕರ್ನಾಟಕ ಪ್ರದೇಶ ವ್ಯಾಪ್ತಿಯ ಸ್ಥಳೀಯ ವ್ಯಕ್ತಿಗಳಿಗೆ ಲಭ್ಯವಿರುವ ಗುಂಪು-ಬಿ ಹುದ್ದೆಗಳಿಗೆ ಪ್ರತಿಶತ 75, ಗುಂಪು-ಸಿ ಹುದ್ದೆಗಳಿಗೆ ಪ್ರತಿಶತ 80 ಹಾಗೂ ಗುಂಪು-ಡಿ ಹುದ್ದೆಗಳಿಗೆ ಪ್ರತಿಶತ 85 ಹುದ್ದೆಗಳನ್ನು ಪ್ರಾದೇಶಿಕ ಸ್ಥಳೀಯ ವೃಂದಕ್ಕೆ ಮೀಸಲಿಟ್ಟು ಆದೇಶಿಸಿದ್ದು, ಉಲ್ಲೇಖ (4)ರಲ್ಲಿ ಅಧೀಕೃತವಾಗಿ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. ಈ ಅಧಿಸೂಚನೆಯನ್ನು ಇಲಾಖೆಯ ಅಧೀಕೃತ ವೆಬ್ ಸೈಟ್‌ನಲ್ಲೂ ಸಹ ಪ್ರಕಟಿಸಿದೆ. ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳಿಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು, 2013ರ ಅಧ್ಯಾಯ 4ರ ನಿಯಮ 6ರಂತೆ ಸ್ಥಳೀಯ ವ್ಯಕ್ತಿಗಳ ಮಾನದಂಡವನ್ನು ಪೂರೈಸುವ ಮತ್ತು ಆ ವೃಂದವನ್ನು (ಪ್ರಾದೇಶಿಕ ಸ್ಥಳೀಯ ವೃಂದವನ್ನು) ಸೇರಲು ಇಚ್ಚಿಸುವ ಅಧಿಕಾರಿ/ ನೌಕರರು ಅನುಬಂಧ-ಸಿ ಯಲ್ಲಿ ನಿರ್ದಿಷ್ಟಪಡಿಸಿದ ನಮೂನೆಯಲ್ಲಿ 45 ದಿನಗಳ ಒಳಗಾಗಿ ಆಯ್ಕೆ ಮಾಡಿಕೊಳ್ಳಲು ಅಭಿಮತ ಪತ್ರ ಸಕ್ಷಮ ಪ್ರಾಧಿಕಾರದ ಮೂಲಕ ಸಲ್ಲಿಸಲು ಈ ಸುತ್ತೋಲೆಯನ್ವಯ ಸೂಚಿಸಿದೆ. ಪ್ರಾದೇಶಿಕ ಸ್ಥಳೀಯ ವೃಂದದ ಅಧಿಕಾರಿ/ ನೌಕರರು ಸಹ 'ಉಳಿದ ಮೂಲ ವೃಂದ' **(parent Residual cadre)**ಕ್ಕೆ ಸೇರಲು ಇಚ್ಚಿಸುವವರು ಸಹ ಅಭಿಮತ ಪತ್ರವನ್ನು ಅನುಬಂಧ - ಸಿ ಯಲ್ಲಿ ನೀಡಬಹುದಾಗಿದೆ.

ಈ ರೀತಿಯ ಸ್ಥಳೀಯ ಮೂಲ ವೃಂದ ಇಲ್ಲವೇ ಉಳಿದ ಮೂಲ ವೃಂದಕ್ಕೆ ಸೇರಲಿಚ್ಚಿಸುವ ನೌಕರರಿಗೆ ಸೇವಾ ಅವಧಿಯಲ್ಲಿ ಪ್ರಸ್ತುತ ಒಂದು ಬಾರಿಗೆ ಮಾತ್ರ ಅವಕಾಶವಿರುತ್ತದೆ. ಕಾರಣ ಸುತ್ತೋಲೆ ಹೊರಡಿಸಿದ 45 ದಿನಗಳೊಳಗಾಗಿ ಕಡ್ಡಾಯವಾಗಿ ತಮ್ಮ ಅಭಿಮತ ಪತ್ರವನ್ನು ಸಲ್ಲಿಸಲು ಸೂಚಿಸಿದೆ. ನಂತರ ಬಂದ ಮನವಿಗಳನ್ನು ಪುರಸ್ಕರಿಸಲು ಅವಕಾಶವಿರುವದಿಲ್ಲ. ಅಧಿಕಾರಿ/ ನೌಕರರು ನಿಗದಿತ ಅವಧಿಯಲ್ಲಿ ಅಭಿಮತ ಪತ್ರವನ್ನು ಸಲ್ಲಿಸದಿರುವ ಸಂದರ್ಭದಲ್ಲಿ ಸ್ಥಳೀಯ ವೃಂದವನ್ನು ಸೇರಲು ಇಚ್ಛೆ ಹೊಂದಿಲ್ಲವೆಂದು ಪರಿಗಣಿಸಲಾಗುವುದು. ತದನಂತರ ಕಾರ್ಯನಿರತ ಅಧಿಕಾರಿ/ ನೌಕರರ ವೃಂದವಾರು ಪ್ರತ್ಯೇಕವಾಗಿ ಅಂದರೆ ಪ್ರಾದೇಶಿಕ ಸ್ಥಳೀಯ ಮೂಲ ವೃಂದ ಹಾಗೂ ಉಳಿದ ಮೂಲ ವೃಂದಗಳಿಗೆ ವ್ಯಕ್ತಿಗಳ ಹಂಚಿಕೆ ಮಾಡಿ, ಅಂತಿಮ ಅಧಿಸೂಚನೆ ಜಾರಿಗೊಳಿಸಲಾಗುವುದು.

( ರಾಧಾಕೃಷ್ಣರಾವ ಮದನಕರ )
ಅಪರ ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

1) ಪ್ರಾಂಶುಪಾಲರು, ಸರಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಕಲಬುರಗಿ
2) ಸಾರ್ವಜನಿಕ ಶಿಕ್ಷಣ ಇಲಾಖೆಯ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರಿಗೆ ಕಳುಹಿಸುತ್ತ, ತಮ್ಮ ವ್ಯಾಪ್ತಿಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸುವುದು ಹಾಗೂ ಈ ಕುರಿತು ವ್ಯಾಪಕ ಪ್ರಚಾರ ನೀಡಲು ತಿಳಿಸಿದೆ.
3) ವಿಭಾಗದ ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ಪ್ರಾಂಶುಪಾಲರಿಗೆ
4) ಕಚೇರಿಯ ಇ- ಆಡಳಿತ ವಿಭಾಗದ ಮುಖ್ಯಸ್ಥರಿಗೆ ಕೊಡುತ್ತ, ಈ ಸುತ್ತೋಲೆಯನ್ನು ಇಲಾಖೆಯ ಅಧೀಕೃತ ವೆಬ್ ಸೈಟ್ ದಲ್ಲಿ ಪ್ರಕಟಿಸಲು ತಿಳಿಸಿದೆ.
5) ಕಚೇರಿಯ ಸೂಚನಾ ಫಲಕಕ್ಕೆ
6) ಕಚೇರಿಯ ಪ್ರತಿ

**ಪ್ರತಿಗಳನ್ನು ಅಗತ್ಯ ಮಾಹಿತಿಗಾಗಿ**

1) ಸರಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಕರ್ನಾಟಕ ಸರಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1
2) ಸರಕಾರದ ಜಂಟಿ ಕಾರ್ಯದರ್ಶಿಗಳು, (ಹೈದ್ರಾಬಾದ ಕರ್ನಾಟಕ ವಿಶೇಷ ಕೋಶ), ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಕರ್ನಾಟಕ ಸರಕಾರದ ಸಚಿವಾಲಯ, ವಿಧಾನ ಸೌಧ, ಬೆಂಗಳೂರು-1
3) ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ
4) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ ಧಾರವಾಡ